# ಕೊಡೆಯ ಬಿಡೆ...

ಲತಾ ಹೆಗಡೆ

**ಮಳೆ ಬಂತು ಮಳೆ**
**ಕೊಡೆ ಹಿಡಿದು ನಡೆ**
**ಜಾರಿ ಬಿದ್ದು ಹೋದ ಮೇಲೆ**
**ಬಟ್ಟೆಯೆಲ್ಲಾ ಕೊಳೆ!**

ಮಳೆಗಾಲದಲ್ಲಿ ಕೊಡೆ ಹಿಡಿದು ಹೊರಟಾಗ ಅಥವಾ ಶಾಲೆ ಮಕ್ಕಳು ಕೊಡೆ ಹಿಡಿದು ನಡೆಯುವುದನ್ನು ಕಂಡಾಗಲೆಲ್ಲಾ ಕನ್ನಡ ಶಾಲೆಯಲ್ಲಿ ಕಲಿತ ಈ ಪದ್ಯ ನೆನಪಾಗಿ ಗುನುಗುವುದುಂಟು. ಬಾಲ್ಯದ ಸವಿನೆನಪಿಗೆ ಜಾರುವುದೂ ಉಂಟು. ಆದರೆ ಅನೇಕ ದಶಕಗಳ ಹಿಂದೆ ಕಲಿಕೆಯ ಪ್ರಾರಂಭಿಕ ಹಂತದಲ್ಲಿದ್ದಾಗ ಇದೇ ಶಿಶುಗೀತೆ ನನ್ನ ಪುಟ್ಟ ಕೌತುಕ ಮನದಲ್ಲಿ ಭಯ ಮೂಡಿಸಿತ್ತು ಎಂದರೆ ಯಾರಿಗೇ ಆದರೂ ಆಶ್ಚರ್ಯ ನಿಶ್ಚಿತ. ತಾಳಿ, ಕಾರಣವನ್ನೂ ವಿವರಿಸುತ್ತೇನೆ.

'ಮಳೆ ಬಂದಾಗ ಕೊಡೆ ಹಿಡಿದು ನಡೆಯೋದೇನೋ ಸರಿ, ಆದರೆ ಜಾರಿ ಬೀಳೋದು, ಬಟ್ಟೆಯೆಲ್ಲಾ ಕೊಳೆಯಾಗೋದು ಅಂದ್ರೆ...? ಅಂತಂದ್ರೆ ಕೊಡೆ ಹಿಡಿದು ನಡೆದ್ರೆ ಜಾರಿ ಬೀಳೋದು ಗ್ಯಾರಂಟಿ!' – ಈ ರೀತಿಯಾದ ನನ್ನದೇ ತರ್ಕ ಮನದಾಳದಲ್ಲಿ ಬೇರೂರಿಬಿಟ್ಟಿತ್ತು. ಆ ಕಾರಣದಿಂದಲೇ ನನ್ನಷ್ಟೇ ಎತ್ತರವಿದ್ದ ಆ ಚೂಪು ಕಪ್ಪು ಕೊಡೆಯನ್ನು ಮುಟ್ಟಲೂ ಹೆದರುತ್ತಿದ್ದೆ. ಆದರೂ ಬಾಗಿಲಿನ ಮೂಲೇಲಿ ಸದಾಸರ್ವದಾ ಶೀರ್ಷಾಸನದಲ್ಲಿ ನಿಂತು ಹೆದರಿಸುತ್ತಿದ್ದ ಆ ಚೂಪು ಕೊಡೆಯನ್ನು ಮಳೆ ಹೊಯ್ಯುವಾಗ ಬಿಡಿಸಿ ನಿಲ್ಲುವಷ್ಟು ಹುಂಬಧೈರ್ಯ ಮಾಡುತ್ತಿದ್ದದ್ದಕ್ಕೆ ಕಾರಣವೇ ಎದುರು ಮನೆಯ ಸುಜಾತಾ. ಅವಳು ಮಾಡಿದಂತೆ ಅಂಗಳದಲ್ಲಿ ನಿಂತು ಛತ್ರಿಯನ್ನು ಗಿರ್ರನೆ ತಿರುಗಿಸಿದಾಗ ಅದರ ಅಂಚಿನಿಂದ ಮಳೆನೀರು ವೃತ್ತಾಕಾರವಾಗಿ ಹರಡಿ ಸಮಾನಾಂತರದಲ್ಲಿ ಸುತ್ತಲೂ ಚಿಮ್ಮುತ್ತಿದ್ದದ್ದನ್ನು ನೋಡುತ್ತಿದ್ದರೆ ಸಮಯ ಸರಿದದ್ದೇ ತಿಳಿಯುತ್ತಿರಲಿಲ್ಲ. ಅಂಗಳದಲ್ಲಿ ಒಂದೇಕಡೆ ನಿಂತ ಕಾರಣ ಬೀಳುವ ಭಯವಿರದೇ ಛತ್ರಿಯೊಡನಾಟದಲ್ಲಿ ಮಗ್ನಳಾಗಿದ್ದಾಗ ಅಣ್ಣಂದಿರ ಗೇಲಿ ಪ್ರಾರಂಭಗೊಂಡು ನನ್ನ ಲಹರಿ ಭಂಗಗೊಳ್ಳುತ್ತಿತ್ತು.

'ಏ ಹಂಚೀಕಡ್ಡಿ! ಛತ್ರಿ ಜೊತೆಗೆ ಗಾಳೀಲಿ ಎಲ್ಲಾದ್ರೂ ಹಾರಿ ಹೋದೀಯ...!', 'ಇರೋದೇ ಒಂದ್ ಛತ್ರಿ..., ಸುಮ್ನೆ ಒಳಗ್ ಬಾ' – ನಾ ಹಾರಿ ಹೋಗೋದು ಒತ್ತಟ್ಟಿಗೆ ಇರಲಿ ಇದ್ದಬದ್ದ ಧೈರ್ಯ ಮಾತ್ರ ಹೇಳ ಹೆಸರಿಲ್ಲದಂತೆ ಗಾಳೀಲಿ ತೂರಿತ್ತು. ಛತ್ರಿಯ ಉಸಾಬರಿಯೇ ಬೇಡವೆಂದು ಗೆಳತಿಯ ಮನೆ, ಸಮೀಪದ ಅಂಗಡಿ ಮುಂತಾಗಿ ಹೊರ ಹೋಗುವ ಪ್ರಮೇಯ ಬಂದಾಗಲೆಲ್ಲಾ ನೆನೆದೇ ಹೋಗುತ್ತಿದ್ದೆ. ಪರಿಣಾಮವೇ 'ಆಕ್ಷೀ... ಆಕ್ಷೀ!' ಸೀನುವ ರಭಸಕ್ಕೆ ಪಿಳ್ ಜುಟ್ಟು ಎಗರೆಗರಿ ಬೀಳುತ್ತಿತ್ತು. ಕೆಟ್ಟದಾಗಿ ಸೀನುತ್ತಲೇ ಸೋರುವ ಮೂಗನ್ನು ಫ್ರಾಕಿನಿಂದಲೇ ಒರೆಸಿಕೊಳ್ಳುತ್ತಿದ್ದೆ. ಮತ್ತೆ ಅಣ್ಣಂದಿರ ಗೇಲಿ ಶುರು... 'ಆ ಎನ್ಸಿಸಿ ಪ್ಯಾಂಟಿಗಾದ್ರೂ ವರ್ಸು, ಗಂಜಿ ಹಾಕೂದೇ ಬೇಡ. ನಿನ್ ಸ್ಟಾರ್ಚೇ ಸಾಕು ಸ್ಟಿಫ್ಫಾಗಿ ನಿಲ್ಲುತ್ತೆ...' ಒಡಹುಟ್ಟಿದವರ ಮುಸಿಮುಸಿ ಕಿಸಿಯುವಿಕೆಗೆ ಘೋರ ಅಪಮಾನವಾಗಿ ಮೂಗಿನ ಜೊತೆಜೊತೆಗೆ ಕಣ್ಣಲ್ಲೂ ಗಂಗಾ ಭಾಗೀರಥಿ ಧುಮ್ಮಿಕ್ಕುತ್ತಿತ್ತು. ಆಯಿಯಾದ್ರೂ ಅಣ್ಣಂದಿರಿಗೆ ಬಯ್ಯುತ್ತಾಳೇನೋ ಅಂದ್ರೆ ಊಹೂಂ! ನನಗೇ ಮಂತ್ರಾಕ್ಷತೆ ಹಾಕುತ್ತಾ ಪಂಜಿಯಿಂದ ನನ್ನ ಒದ್ದೆ ತಲೆಯನ್ನು ಉರಿಯುವಷ್ಟು ಗಸಗಸನೆ ಒರೆಸುತ್ತಾ ತಲೆಯ ಮೇಲೆ ಸಿಟ್ಟನ್ನು ತೀರಿಸಿಕೊಳ್ಳುತ್ತಿದ್ದಳು. ಸಾಲದ್ದಕ್ಕೆ ಆಗೇನಾದರೂ ತಲೆ ಹಾರಿಸುತ್ತಾ ಸೀನಿದೆನೆಂದುಕೊಳ್ಳಿ, ಥಟ್ಟನೆ ಗಟ್ಟಿಯಾಗಿ ಮೊಟಕುತ್ತಿದ್ದಳು.

ಮುಂದೆ ಪದವಿಯನ್ನು ಕೊಡೆ ಇಲ್ಲದೇ ಮುಗಿಸಿದೆನಾದರೂ ಸ್ನಾತಕೋತ್ತರ ಪದವಿಯಲ್ಲಿದ್ದಾಗ ಮನಮೋಹಕ ಕೆಂಪು ವರ್ಣದಲ್ಲಿ ಬಿಳೀ ಚುಕ್ಕೆಯಿರುವ ಟೂ ಫೋಲ್ಡ್ ಕೊಡೆ ಕೈಗೆ ಬಂದಾಗಲೇ ಚೂಪು ಕಪ್ಪು ಕೊಡೆಯ ದೆಸೆಯಿಂದ ಬಾಲ್ಯದಲ್ಲಿ ಉಂಟಾಗಿದ್ದ ಪೂರ್ವಗ್ರಹ ಪೀಡಿತ ಭಾವ ತೊಲಗಿದ್ದು. ನಂತರದಲ್ಲಿ ಎಲ್ಲಾ ಕಾಲದಲ್ಲೂ ನನ್ನ ಜೊತೆಗಾತಿಯಾಗಿದ್ದ ಅದನ್ನು ಬಲು ಜತನದಿಂದಲೇ ಕಾಪಿಟ್ಟಿದ್ದೆ. ಗ್ರೀಷ್ಮನ ಬಿರು ಬೇಗೆ, ವರುಣನ ಆರ್ಭಟ, ಶರದೃತುವಿನ ಕುಳಿರ್ಗಾಳಿಯಿಂದ ತಪ್ಪಿಸಿಕೊಳ್ಳಲು ಅದೇ ಕೊಡೆ ಅಪಾರ ನಿಷ್ಠೆ ತೋರಿತ್ತು.

ಗೆಳತಿಯರೊಟ್ಟಿಗೆ ಸಿನಿಮಾ ನೋಡಲೆಂದು ಮೆಜೆಸ್ಟಿಕ್‌ನ ಜನಜಂಗುಳಿಯಲ್ಲಿ ಹೋಗುವಾಗ ಬೇಕೆಂತಲೇ ಮೈ ಕೈ ತಾಗಿಸಿ 'ಸಾರಿ' ಎಂದು ಹಲ್ಲು ಕಿರಿಯುತ್ತಿದ್ದ ಬೀದಿ ಕಾಮಣ್ಣರಿಂದಲೂ ರಕ್ಷಿಸುತ್ತಾ ಅಂಗರಕ್ಷಕನಾದದ್ದೂ ಕೂಡ ಅದೇ ಕೊಡೆ. ಹೇಗೆಂದರೆ ಕೈಯಲ್ಲಿ ಮಡಚಿದ ಟೂ ಫೋಲ್ಡ್ ಛತ್ರಿ ಹಿಡಿದು ಮೈಯೆಲ್ಲಾ ಕಣ್ಣಾಗಿ ನಡೆಯುತ್ತ ಕೈ ತಾಕಿಸಲು ಯತ್ನಿಸುವವರ ಕೈಗೆ ಆಕಸ್ಮಿಕವೆಂಬಂತೆ ಛತ್ರಿಯಿಂದ ಬಲವಾಗಿ ಹೊಡೆದು 'ಸಾರಿ' ಎಂದು ನಾವೂ ಹಲ್ಕಿರಿಯುತ್ತಾ ಪಡ್ಡೆಗಳನ್ನು ಇಂಗು ತಿಂದ

